## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1206/2015

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಓಂಕಾರಪ್ಪ | CW: 8 | PW: 7 |
| ತಂದೆಯ ಹೆಸರು | : | ನಾಗಪ್ಪ | | |
| ವಯಸ್ಸು | : | 55 | | |
| ವೃತ್ತಿ | : | ಬಸ್ ಏಜೆಂಟ್ | | |
| ವಾಸಸ್ಥಳ | : | ಸವಳಂಗ | | |

ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು, ಚಾಸಾ 1, 4 ರಿಂದ 7 ರವರು ಗೊತ್ತಿಲ್ಲ. ಚಾಸಾ 9 ರವರು ಗೊತ್ತು ಅವರು ಈಗ ತೀರಿಕೊಂಡಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ನಾನು ಯಾವುದೇ ಗಲಾಟೆ ನೋಡಿಲ್ಲ ಹಾಗೂ ಗಲಾಟೆ ಬಿಡಿಸಿಲ್ಲ. ಈ ಪ್ರಕರಣದ ಸಂಬಂಧ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ–

ದಿಃ 27.07.2015 ರಂದು ನಾನು ಮತ್ತು ಚಾಸಾ 9 ರವರು ಸವಳಂಗ ಗ್ರಾಮದ ಮಿಕ್ಕಿದ ಮಾರಿಕಾಂಬದ ದೇವಸ್ಥಾನದಲ್ಲಿ ವಿಶ್ರಾಂತಿ ಪಡೆಯಲು ಹೋಗಿದ್ದೆವು ಎಂದರೆ ಸರಿಯಲ್ಲ. ಸಂಜೆ

4.30 ರ ಸಮಯದಲ್ಲಿ ಸದರಿ ದೇವಸ್ಥಾನದ ಆವರಣದಲ್ಲಿ ಗಂಡ ಹೆಂಡತಿಯನ್ನು ಸರಿಪಡಿಸುವ ವಿಚಾರದಲ್ಲಿ ಚಾಸಾ 1, 4, 5 ಮತ್ತು 7 ರವರು ಹಾಗೂ ಆರೋಪಿಗಳು ಸೇರಿದ್ದರು ಎಂದರೆ ಸರಿಯಲ್ಲ. ಅಲ್ಲಿ ಏಕಾಏಕಿ ಗದ್ದಲ ಶುರುವಾಗಿ 11 ನೇ ಆರೋಪಿಯು ಚಾಸಾ 7 ರವರಿಗೆ ಕಲ್ಲಿನಿಂದ ಬಲಗಣ್ಣಿನ ಕೆಳಭಾಗ ಹೊಡೆದು ರಕ್ತಗಾಯಪಡಿಸಿದರು ಎಂದರೆ ಸರಿಯಲ್ಲ. 1 ನೇ ಆರೋಪಿಯು ಚಾಸಾ 7 ರವರ ಎದೆಗೆ , ಕುತ್ತಿಗೆಗೆ ದೊಣ್ಣೆಯಿದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ 9 ರವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳೆಲ್ಲರೂ ಚಾಸಾ 1, 4, 5 ಮತ್ತ 6 ರವರಿಗೆ ಕೈಕಾಲುಗಳಿಂದ ಹೊಡೆದು ಪ್ರಾಣ ಬೆದರಿಕಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಸಂಬಂಧ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪದ ಹೇಳಿಕೆಯನ್ನು ನಿಪಿ 6 ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ– ಆರೋಪಿ ಪರ ವಕೀಲರಿಂದಃ–

ಆರೋಪಿ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.